

‘ಮಾಯೆ’ ಶಬ್ದ ಕೇಳಿಸಿದ್ದೇ ಹಾಡು ಮುಂದಕಿಲ್ಲವೆಂಬಂತೆ ನಿಂತಿತು. ಆಹಾ, ತಾಯಿಯ ಮಡಿಲು ಮಾಯೆಯಲ್ಲ. ನಲುಮೆ, ಒಲುಮೆ ಮಾಯೆಯಲ್ಲ. ಒಲಿದ ಹೃದಯಗಳು ಮಾಯೆಯಲ್ಲ. ಈ ಭೂಮಿ, ಈ ಗಾಳಿ, ಈ ನೀರು, ಈ ಬೆಳಕು, ಈ ಬಾಳ್ವೆ ಮಾಯೆಯಲ್ಲ. ಅವನಿರುವಲ್ಲಿಗೆ ಕೇಳಿಸಲಿ ಎಂದು ಕೂಗಿ ಕೂಗಿ ಹೇಳಿದೆ. ಗೋವರ್ಧನಗಿರಿ ಪ್ರತಿಧ್ವನಿಸಿತು. ಯಮುನೆ ಜುಳುಜುಳುಗುಟ್ಟಿದಳು. ಗಾಳಿ ತಣ್ಣಗೆ ಬೀಸಿತು.

ಕರುವಿಗಾಗುವಷ್ಟು ಬಿಟ್ಟು ಹಾಲು ಕರೆದೆ. ಅದರ ರಸದುನಿಯಲ್ಲಿ ‘ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ...’

‘ಇದು ಜಗದ ರಸದುನಿ ಮಗಳೆ’ ಎಂದಂತಾಯಿತು ಮನದಲ್ಲಿ. ಕಣ್ಣು ಮುಚ್ಚಿ ನೋಡಿದೆ. ಮುನಿ. ಕಂಕುಳಲ್ಲಿ ತಾಳೆಗರಿಯ ಕಟ್ಟು. ಬಲಗೈಯಲ್ಲಿ ಕಂಠ. ಎಡಗೈಯಲ್ಲಿ ಕಮಂಡಲು. ಅಪರಿಚಿತ. ‘ಯಾರು?’ ಅನ್ನುವ ಮೊದಲೇ ಆ ರೂಪ ಮಾಯವಾಯಿತು. ಹಾಲು ಕರೆಯಲಿದ್ದ ಹಸುವಿನ ಕರು ‘ಅಂಬಾ’ ಎಂದು ಕರೆಯಿತು.

ಕರುವನ್ನು ಬಿಟ್ಟೆ. ಅದು ಕೆಚ್ಚಲಿಗೆ ಬಾಯಿಕ್ಕಿದ ಕೊಂಚ ಹೊತ್ತಿಗೆ ಹಸು ಸೊರುಬಿಟ್ಟಿತು. ಅದನ್ನು